ಮಾನ್ಯತೆ ಹೊಂದಿರುವ ಬಗ್ಗೆ ಪರಿಸರ ಮತ್ತು ಮಾಲಿನ್ಯ ಇಲಾಖೆಯಿಂದ ಖಾತರಿ ಪಡೆಯಬೇಕು. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾಲಿನ್ಯ ನಿಯಂತ್ರಣದ ಬಗ್ಗೆ ದೃಢೀಕರಣ ಪತ್ರ ಪಡೆಯಬೇಕು. ಕಾರ್ಖಾನೆಯ ನಿರ್ಮಾಣಕ್ಕೆ ಯಂತ್ರೋಪಕರಣ ಸರಬರಾಜು ಮಾಡುವ ಗುತ್ತಿಗೆ ಕೆಲಸದ ಆದೇಶವನ್ನು ಹಣಕಾಸು ಸಂಸ್ಥೆಗಳಿಂದ ಅವಧಿ ಸಾಲ ಮಂಜೂರಾತಿ ಖಾತರಿ ದೊರೆತ ಮೇಲೆ ನೀಡಬೇಕು. ಯೋಜನಾ ವೆಚ್ಚವನ್ನು ಈ ಕೆಳಕಂಡಂತೆ ಭರಿಸಬೇಕು.

1. ಸದಸ್ಯರ ವಂತಿಗೆ - ಯೋಜನಾವೆಚ್ಚದ ಶೇ. 10ರಷ್ಟು
2. ರಾಜ್ಯ ಸರ್ಕಾರದ ಶೇರು ವಂತಿಗೆ - ಯೋಜನಾ ವೆಚ್ಚದ ಶೇ. 30ರಷ್ಟು
3. ಹಣಕಾಸು ಸಂಸ್ಥೆಗಳಿಂದ - ಯೋಜನಾ ವೆಚ್ಚದ ಶೇ. 60ರಷ್ಟು

ಇ) ಸದಸ್ಯರಿಂದ ಶೇರು ಬಂಡವಾಳದ ಪೂರ್ಣ ಹಣ ಸಂಗ್ರಹಣೆ ಆದ ನಂತರ ರಾಜ್ಯ ಸರ್ಕಾರವು ತನ್ನಪಾಲಿನ ಶೇ. 30 ಶೇರು ಹಣ ಬಿಡುಗಡೆ ಮಾಡುವುದು.

ಈ) ವಿವರ ಈ ಕೆಳಕಂಡಂತಿದೆ.-

1. ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಕಿರಿಗೆರೆ, ಧಾರವಾಡ ಜಿಲ್ಲೆ
2. ಮೈಡಗಿರಿ, ಸಸಕಾ, ಗಂಗಾಪುರ, ಧಾರವಾಡ ಜಿಲ್ಲೆ,
3. ಪಾರ್ಮರ್ಸ್ ಕೊಆಪರೇಟಿವ್ ಶುಗರ್ ಫ್ಯಾಕ್ಟರಿ ಗಂಗೀಭಾವಿ, ಧಾರವಾಡ ಜಿಲ್ಲೆ.

ಹಿರೇಕೆರೂರು ಪಟ್ಟಣದಲ್ಲಿ ಕೈಗಾರಿಕಾ ಶೆಡ್ಡುಗಳ ನಿರ್ಮಾಣ

421(658) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು).- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣದಲ್ಲಿ ಸಣ್ಣ ಕೈಗಾರಿಕಾ ಇಲಾಖೆಯಿಂದ ಕಟ್ಟುತ್ತಿರುವ ಶೆಡ್ಡುಗಳು ಇನ್ನೂ ಪೂರ್ತಿ ಆಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು)

ಅ) ಹೌದು.

ಆ) ಇನ್ನು 4, 5 ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು.

ರೇಷ್ಮೆ ಪ್ರದರ್ಶಕರ ನೇಮಕಾತಿ

422(655) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು).- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಪ್ರದರ್ಶಕರ ಹುದ್ದೆಗೆ ಆಯ್ಕೆಯಾದವರು ಇದುವರೆಗೆ ನೇಮಕಾತಿ ಆದೇಶ ನೀಡದೆ ಇರುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ನೇಮಕಾತಿ ಆದೇಶ ನೀಡಲಾಗುವುದು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು)

ಅ) ಹೌದು.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಪುರಸಭೆ, ಪಟ್ಟಣ ಪಂಚಾಯತಿಗಳಿಗೆ ನೀಡಿರುವ ಅಭಿವೃದ್ಧಿ ಧನ

424 (660) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು).- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆ ಪಟ್ಟಣ ಪಂಚಾಯತಿಗಳಿಗೆ ಸರಕಾರದಿಂದ ಅಭಿವೃದ್ಧಿಗೆ ಧನ ಸಹಾಯಕ ಮಾಡಲು ಇರುವ ಯೋಜನೆಗಳಾವುವು;

ಆ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಯಾವ ಪುರಸಭೆ, ಪಟ್ಟಣ ಪಂಚಾಯತಿಗಳಿಗೆ ಎಂದು ಎಷ್ಟು ಧನ ಸಹಾಯ ಕೊಡಲಾಗಿದೆ;

ಶ್ರೀ ಮೆರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಪುರಸಭೆ, ನಗರಸಭೆ, ಪಟ್ಟಣ ಪಂಚಾಯತಿಗಳಿಗೆ ಅಭಿವೃದ್ಧಿ ಅನುದಾನವಾಗಿ ಸರ್ಕಾರದಿಂದ ಧನ ಸಹಾಯ ಮಾಡಲಾಗುತ್ತಿದೆ.

ಆ) ಸದರಿ ಅನುದಾನದಿಂದ 1996-97ನೇ ಸಾಲಿನಲ್ಲಿ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

1.	ಹುಮ್ನಾಬಾದ್	ರೂ. 10.00 ಲಕ್ಷ
2.	ಚಿಟಗುಪ್ಪ	ರೂ. 10.00 ಲಕ್ಷ
3.	ಬಸವಕಲ್ಯಾಣ	ರೂ. 5.00 ಲಕ್ಷ
4.	ಔರಾದ್ (ಬಿ)	ರೂ. 5.00 ಲಕ್ಷ
5.	ಬೀದರ್	ರೂ. 20.00 ಲಕ್ಷ
6.	ಹೊಸಕೋಟೆ	ರೂ. 10.00 ಲಕ್ಷ